ದಿವಸಗಳಿಂದ ಅದಕ್ಕೆ ಅವಕಾಶ ಕೊಡುತ್ತೇವೆ ಎನ್ನುವ ಆಶ್ವಾಸನೆ ಸಿಕ್ಕಿದೆ. ಅದಕ್ಕೆ ಕಾಲಾವಕಾಶ ಕೊಟ್ಟಿಲ್ಲ. ದಯಮಾಡಿ ತಾವು ಇವತ್ತು ಅವಕಾಶ ಕೊಡಬೇಕು ಎಂದು ನಿಮ್ಮನ್ನು ವಿನಂತಿಸಿಕೊಳ್ಳುತ್ತೇನೆ.

ಅಧ್ಯಕ್ಷರು:– ನೀವು ಬರೆದಿರುವ ಪತ್ರ ಇವೊತ್ತು ನೋಡಿದ್ದೇನೆ. ನಾಳೆ ಅದರ ಬಗ್ಗೆ ಒಂದು ತೀರ್ಮಾನ ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ:– ಮಾನ್ಯ ಅಧ್ಯಕ್ಷರೆ, ಕಳೆದ ಶನಿವಾರ ಮತ್ತು ಶುಕ್ರವಾರ ದೆಹಲಿಯಲ್ಲಿ ಈ ದೇಶದ ವಿದ್ಯುತ್ ಮಂತ್ರಿಗಳ ಸಮ್ಮೇಳನ ನಡೆದಿದೆ. ಆ ಸಮ್ಮೇಳನದಲ್ಲಿ ಒಂದು ತೀರ್ಮಾನ ಏನು ತೆಗೆದುಕೊಂಡಿದ್ದಾರೆ ಅಂದರೆ ವ್ಯವಸಾಯಕ್ಕೆ ಒದಗಿಸಿರತಕ್ಕಂಥ ವಿದ್ಯುತ್ ಬಗ್ಗೆ ಕೂಡ ಹಾಕಬೇಕು ಎನ್ನತಕ್ಕಂಥ ತೀರ್ಮಾನವಾಗಿದೆ. ಅದಕ್ಕೆ ನಮ್ಮ ರಾಜ್ಯಗಳಿಂದ ಬಹುಶಃ ಮಂತ್ರಿಗಳು ಹೋಗಿದ್ದರೋ ಅಥವಾ ಅಧಿಕಾರಿಗಳು ಹೋಗಿದ್ದರೋ, ಯಾರು ಹೋಗಿದ್ದರೋ ಎಂದು ಗೊತ್ತಿಲ್ಲ. ಅದರ ಬಗ್ಗೆ ಪತ್ರಿಕೆಯಲ್ಲಿ ಓದಿದ್ದು ಏನೆಂದರೆ ಇದಕ್ಕೆ ಎಲ್ಲರೂ ಕೂಡ ಒಪ್ಪಿದ್ದಾರೆ ಎನ್ನತಕ್ಕಂಥ ಮಾತನ್ನೂ ಸಹ ಪತ್ರಿಕೆಯಲ್ಲಿ ಓದಿದ್ದೇನೆ. ಇದರಿಂದ ನಮ್ಮ ರಾಜ್ಯದಲ್ಲಿ ಇರತಕ್ಕಂತಹ ರೈತರಿಗೆ ಈಗಾಗಲೇ ವಿದ್ಯುತ್ ಬಗ್ಗೆ ಇಲ್ಲಿ ಚರ್ಚೆ ಆಗಬೇಕಾಗಿತ್ತು. ಅದು ಕಾಲಾವಕಾಶ ಇಲ್ಲದೇ ಇರುವುದರಿಂದ ಚರ್ಚೆ ಆಗುತ್ತಾ ಇಲ್ಲ. ಇದರಿಂದ ನಮ್ಮ ರಾಜ್ಯದಲ್ಲಿರತಕ್ಕಂಥ ರೈತರಿಗೆ ತೊಂದರೆಯಾಗಿದೆ. ಈಗಾಗಲೇ ವಿದ್ಯುತ್ ಬಗ್ಗೆ ಇಲ್ಲಿ ಚರ್ಚೆ ಆಗಬೇಕಾಗಿತ್ತು. ಆದರೆ ಕಾಲಾವಕಾಶ ಇಲ್ಲದಿರುವುದರಿಂದ ಚರ್ಚೆ ಆಗುತ್ತಿಲ್ಲ. 24 ಗಂಟೆಯಲ್ಲಿ ಕನಿಷ್ಠ 5–6 ಗಂಟೆಯಾದರೂ ವಿದ್ಯುತ್ ಕೊಡುವಂತಹ ಪರಿಸ್ಥಿತಿಯಲ್ಲಿಲ್ಲ. ಇವೊತ್ತಿನ ದಿವಸ ನಮ್ಮ ಭಾಗದಲ್ಲಿ ಬಯಲುಸೀಮೆ ಪ್ರದೇಶದಲ್ಲಿರತಕ್ಕಂಥ ಕೋಲಾರ ಬೆಂಗಳೂರು....

ಅಧ್ಯಕ್ಷರು:– ಇದನ್ನು ನಾಳೆ ಮುಖ್ಯಮಂತ್ರಿಗಳು ಬಂದಾಗ ಚರ್ಚೆ ಮಾಡೋಣ.

ಶ್ರೀ ಸಿ. ಬೈರೇಗೌಡ:– ಅದರಿಂದ ನಾನು ಕೇಳತಕ್ಕದ್ದು ಏನೆಂದರೆ, ವಿದ್ಯುತ್ ಸರಬರಾಜು ಮಾಡುವುದರ ಬಗ್ಗೆ ಹೇಳುತ್ತಿದ್ದೇನೆ. ಏಕೆಂದರೆ ಮುಂದೆ ಬೇಸಿಗೆ ಬರುತ್ತಿದೆ. . . .

ಅಧ್ಯಕ್ಷರು:– ಬರೆದು ಕಳುಹಿಸಿ, ನಾಳೆ ಚರ್ಚೆ ಮಾಡೋಣ.

ಶ್ರೀ ಸಿ. ಬೈರೇಗೌಡ:– ಕಳಿಸೋಣ, ನಾಳೆ ದಿವಸ ಒಂದು ಹೇಳಿಕೆಯನ್ನು ಸರ್ಕಾರದ ಮೂಲಕ ಕೊಡಿಸಬೇಕು. ಇವರು 50 ಪೈಸೆ ತರಹ ನಿಗದಿ ಪಡಿಸುತ್ತಾರೋ ಅಥವಾ ಸರ್ಕಾರದ ಆಲೋಚನೆ ಏನು ಎನ್ನುವುದರ ಬಗ್ಗೆ ಸರ್ಕಾರ ಒಂದು ಹೇಳಿಕೆಯನ್ನು ಕೊಡಬೇಕೆಂದು ನಾನು ತಮ್ಮ ಮೂಲಕ ವಿನಂತಿಸುತ್ತೇನೆ.

ಅಧ್ಯಕ್ಷರು:– ಬರೆದು ಕಳುಹಿಸಿಕೊಡಿ.

ಗಮನ ಸೆಳೆಯುವ ಸೂಚನೆ

ವಿಷಯ:– ಕೋಲಾರ ಜಿಲ್ಲಾ ಪರಿಷತ್ತಿನ ಚಿಕ್ಕಬಳ್ಳಾಪುರ ತಾಂತ್ರಿಕ ವಿಭಾಗದ, ಕಾರ್ಯಪಾಲಕ ಅಭಿಯಂತರರಿಂದ 5 ಕೋಟಿ ರೂಪಾಯಿಗಳ ದುರುಪಯೋಗ.

† ಶ್ರೀ ಸಿ. ಬೈರೇಗೌಡ (ವೇಮಗಲ್):– ಮಾನ್ಯ ಅಧ್ಯಕ್ಷರೆ, ಕೋಲಾರ ಜಿಲ್ಲಾ ಪರಿಷತ್ತಿನ ಚಿಕ್ಕಬಳ್ಳಾಪುರ ತಾಂತ್ರಿಕ ವಿಭಾಗದಲ್ಲಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಕಾನೂನು ಮೀರಿ, ಮತ್ತೆ ಎಲ್ಲವನ್ನೂ ಮೀರಿ ಸುಮಾರು 5ಕೋಟಿ ರೂಪಾಯಿಗಳನ್ನು ದುರುಪಯೋಗ ಮಾಡಿದ್ದಾರೆ. ಇದರ ಬಗ್ಗೆ ಅಲ್ಲಿರತಕ್ಕಂಥ ಅಡ್‌ಮಿನಿಸ್ಟ್ರೇಟರ್ ಕೂಡ ವಿಚಾರಣೆ ನಡೆಸಿದ್ದಾರೆ ಎಂದು ನನಗೆ ತಿಳಿದು

ಬಂದಿದೆ. ಅವರು ವಿಚಾರಣೆ ನಡೆಸಿ ಸರ್ಕಾರಕ್ಕೆ ವರದಿಯನ್ನು ಕಳುಹಿಸಿದ್ದರೂ ಸಹ ಇಲ್ಲಿಯವರೆಗೂ ಸರ್ಕಾರ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಇದರ ಬಗ್ಗೆ ಮಾನ್ಯ ಪಂಚಾಯತ್‌ರಾಜ್ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎಂ.ವೈ. ಘೆರ್ಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):– ಮಾನ್ಯ ಅಧ್ಯಕ್ಷರೆ, ಜೆ.ಎ ರಾಮನ್ ಅವರು ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಿ ಮೂರು ವರ್ಷಗಳು ಇಂಜಿನಿಯರಿಂಗ್ ಡಿವಿಜನ್, ಚಿಕ್ಕಬಳ್ಳಾಪುರದಲ್ಲಿ ಕೆಲಸ ಮಾಡುತ್ತಿದ್ದರು. ಅವರ ಬಗ್ಗೆ ದೂರುಗಳು ಬಂದಿದೆ. ಆದರಿಂದಾಗಿ ಕೋಲಾರದ ಆಡ್‌ಮಿನಿಸ್ಟ್ರೇಟರ್ ಚೀಫ್ ಸೆಕ್ರೆಟರಿಯವರಿಗೆ ಒಂದು ಆದೇಶ ಕೊಟ್ಟು ಅವರ ಆಫೀಸ್ ಇನ್ಸ್‌ಪೆಕ್ಷನ್ ಮಾಡಿ ರಿಪೋರ್ಟ್ ಕಳುಹಿಸಬೇಕೆಂದು ಅಕ್ಟೋಬರ್ 1992ರಲ್ಲಿ ಹೇಳಿದ್ದರು. 17ನೇ ನವೆಂಬರ್‌ನಲ್ಲಿ ಚೀಫ್ ಸೆಕ್ರೆಟರಿಯವರು ರಿಪೋರ್ಟ್ ಕೊಟ್ಟಿದ್ದಾರೆ, ಮತ್ತು ಆ ರಿಪೋರ್ಟ್ ನನ್ನ ಇಲಾಖೆಗೆ ದಿನಾಂಕ 6-1-93ರಲ್ಲಿ ಬಂದಿದೆ. ಇದರಲ್ಲಿ ಫ್ರೈಮಾಫೇಸಿ ಕೇಸ್ ಇದೆ ಎಂದು ಗೊತ್ತಾಗಿ ಇದನ್ನು ಲೋಕಾಯುಕ್ತಕ್ಕೆ ಪಹಿಸಿಕೊಡಲು ನಾವು ತೀರ್ಮಾನ ತೆಗೆದುಕೊಂಡಿದ್ದೇವೆ.

ಶ್ರೀ ಸಿ. ಬೈರೇಗೌಡ:– ಮಾನ್ಯ ಅಧ್ಯಕ್ಷರೆ, ಲೋಕಾಯುಕ್ತದ ಬಗ್ಗೆ ಈ ಸದನದಲ್ಲಿ ಸಾಕಷ್ಟು ಚರ್ಚೆ ಆಗಿದೆ. ಲೋಕಾಯುಕ್ತ ಯಾವ ಯಾವ ಸಂದರ್ಭದಲ್ಲಿ ಯಾವ ಯಾವ ರೀತಿ ನಡೆದುಕೊಂಡಿದೆ ಏನೇನು ಆಗಿದೆ ಎನ್ನತಕ್ಕಂಥದ್ದು ಗೊತ್ತಿದೆ. ನಾನು ಈಗ ಅದರ ವಿವರಕ್ಕೆ ಹೋಗುವುದಿಲ್ಲ. ಹೀಗೆ ಗೊತ್ತಾದ ಮೇಲೆ ಹಗಲು ಕಂಡ ಬಾವಿಗೆ ರಾತ್ರಿ ಬೀಳುವಂಥ ಕೆಲಸವನ್ನು ಮಾಡುವುದಕ್ಕೆ ಸರ್ಕಾರದವರು ಹೊರಟಿದ್ದಾರೆ. ನಾನಂತೂ ಅವರು ಕೊಟ್ಟ ರತಕ್ಕಂಥ ಉತ್ತರದಿಂದ ತೃಪ್ತನಾಗಿಲ್ಲ. ಕಾರಣ ಏನೆಂದರೆ, ಅವರೇ ಹೇಳಿದ್ದಾರೆ. ಇದು ಫ್ರೈಮಾಫೇಸಿ ಕೇಸ್ ಎಂದು ಸರ್ಕಾರ ಒಪ್ಪಿಕೊಂಡಿದೆ. ಇಲ್ಲಿ ದುರುಪಯೋಗ ಆಗಿರತಕ್ಕದ್ದು 5ಕೋಟಿ ರೂಪಾಯಿಗಳು. ಇದರ ಬಗ್ಗೆ ವಿಚಾರಣೆ ಕೂಡ ನಡೆದಿದೆ. ಅದೂ ಕೂಡ ಸಾಬೀತಾಗಿದೆ. ಇದನ್ನು ಜಿಲ್ಲಾ ಪರಿಷತ್ತಿನ ಸಭೆಯಲ್ಲಿ ಮತ್ತು ಇನ್ನೂ ಅನೇಕ ಸಂದರ್ಭಗಳಲ್ಲಿ ನಾನೇ ಪ್ರಸ್ತಾಪ ಮಾಡಿದೆ. ನಾನು ಹೇಳಿದ ಮೇಲೆ ವಿಚಾರಣೆ ಕೂಡ ಆಗಿದ್ದು ಸರ್ಕಾರಕ್ಕೆ 6ನೇ ತಾರೀಖು ವರದಿ ಬಂದಿದ್ದು, ಅದನ್ನು ಲೋಕಾಯುಕ್ತಕ್ಕೆ ಕಳುಹಿಸುತ್ತೇವೆ, ಎಂದರೆ ಅದನ್ನು ಒಪ್ಪತಕ್ಕಂಥದ್ದಲ್ಲ. ತತ್‌ಕ್ಷಣ ನೀವು ಅವರನ್ನು ಸಸ್‌ಪೆಂಡ್ ಮಾಡತಕ್ಕದ್ದು. ನೂರೋ, ಇನ್ನೂರೋ, ಸಾವಿರ, ಎರಡು ಸಾವಿರ ಆದರೆ ನಾನು ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಸುಮಾರು 5ಕೋಟಿ ರೂಪಾಯಿಗಳ ದುರುಪಯೋಗ ಆಗಿರುವುದು, ಮಾನ್ಯ ಅಧ್ಯಕ್ಷರೆ, ಈ ಸರ್ಕಾರದಲ್ಲಿ ಯಾವ ರೀತಿ ನಡೆಯುತ್ತಿದೆ ಎಂದರೆ, ಮಾನ್ಯ ಮಂತ್ರಿಗಳು ಅವರನ್ನು ಅಲ್ಲಿಂದ ವರ್ಗ ಮಾಡಿದ್ದೇವೆಂದು ಹೇಳಿದ್ದಾರೆ. ಆದರೆ ಅವರನ್ನು ವರ್ಗ ಮಾಡಿ ಹಾಕಿರುವುದು ಎಲ್ಲಿಗೆ ಗೊತ್ತೆ? ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಗೆ ಇವರು ಹಾಕಿರುವುದು ಸಣ್ಣ ಹುಲ್ಲುಗಾವಲಿನಿಂದ ದೊಡ್ಡ ಹುಲ್ಲುಗಾವಲಿಗೆ ಹಾಕಿದ್ದಾರೆ. ಇದು ಸರ್ಕಾರದ ನೀತಿ. ಸಣ್ಣ ಹುಲ್ಲುಗಾವಲಿನಲ್ಲಿ ಮೇಯ್ದು ಅದನ್ನು ಸರ್ವನಾಶ ಮಾಡಿದ್ದು ಆಯಿತು. ಈಗ ದೊಡ್ಡ ಹುಲ್ಲುಗಾವಲಿಗೆ ಹೋಗಿ ಅಲ್ಲಿ ಯಥೇಚ್ಛವಾಗಿ, ಎಷ್ಟು ಬೇಕಾದರೂ ಮೇಯಿ ಎಂದು ಹೇಳಿ ಸಣ್ಣ ಹುಲ್ಲುಗಾವಲಿನಿಂದ ಅಂದರೆ 5ಕೋಟಿ ರೂಪಾಯಿಗಳ ದುರುಪಯೋಗ ಮಾಡಿರುವುದನ್ನು ಬಿಟ್ಟು ಇನ್ನೊಂದು 50ಕೋಟಿ ರೂಪಾಯಿಗಳನ್ನೋ 100ಕೋಟಿ ರೂಪಾಯಿಗಳನ್ನೋ ಮೇಯಿರಿ ಎಂದು ಬಿ.ಡಿ.ಎ.ಗೆ ಹೋಗಿ ಎಂದು ಹೇಳಿ ಅಲ್ಲಿಗೆ ಹಾಕಿ ಸರ್ಕಾರದವರು ತಮ್ಮ ನೀತಿಯನ್ನು ಅನುಸರಿಸಿದ್ದಾರೆ.

ವರ್ಗಾವಣೆ ವಿಚಾರದಲ್ಲಿ ಸಾಕಷ್ಟು ಹಣದ ವ್ಯವಹಾರ ನಡೆದಿದೆ. ಲಕ್ಷಾಂತರ ರೂಪಾಯಿ ಹಣ ಕೈ ಬದಲಾಗಿದೆ. ಆದ್ದರಿಂದ ಇವರನ್ನು ಸಸ್‌ಪೆಂಡ್ ಮಾಡುವುದಕ್ಕಿಂತ ಕಡಿಮೆ ಏನಾದರೂ ಕ್ರಮವನ್ನು ತೆಗೆದುಕೊಂಡರೆ ಅದಕ್ಕೆ ನನ್ನ ವಿರೋಧ ಇದೆ. ನಾನು ಈ ಸಂದರ್ಭದಲ್ಲಿ ಅವರನ್ನು ಸಸ್‌ಪೆಂಡ್ ಮಾಡಬೇಕು ಎಂದು ಒತ್ತಾಯಪಡಿಸುತ್ತೇನೆ. ಇಲ್ಲಿ ಇಬ್ಬರು ಮಂತ್ರಿಗಳು ಇದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್:– ನೀವು ಹೇಳಿದನ್ನು ನಾನು ಪೂರ್ತಿ ಕೇಳಿಸಿಕೊಳ್ಳಲಿಲ್ಲ.

ಶ್ರೀ ಸಿ. ಬೈರೇಗೌಡ:– ಕೋಲಾರ ಜಿಲ್ಲಾ ಪರಿಷತ್ತಿನ ಚಿಕ್ಕಬಳ್ಳಾಪುರ ವಿಭಾಗದಲ್ಲಿ ಲೋಕೋಪಯೋಗಿ ಇಲಾಖೆಯಿಂದ ಬಂದಿರತಕ್ಕ ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರು ತಾಂತ್ರಿಕ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾರೆ. ಜಿಲ್ಲಾ ಪರಿಷತ್ತಿನ ಸಭೆಯಲ್ಲಿ ಇವರು ಮಾಡಿರತಕ್ಕ ಅವ್ಯವಹಾರದ ಬಗ್ಗೆ ಚರ್ಚೆಯಾಯಿತು. ಇದು ವಿಚಾರಣೆ ಆಗಬೇಕೆಂದು ಒತ್ತಾಯ ಇತ್ತು ವಿಚಾರಣೆ ಆಗಿದೆ. ಆಡಳಿತಾಧಿಕಾರಿಗಳು ವಿಚಾರಣೆ ನಡೆಸಿದ್ದಾರೆ. ಆಡಳಿತಾಧಿಕಾರಿಗಳ ವಿಚಾರಣೆ ಪ್ರಕಾರ ಅವರ ಮೇಲೆ ಪ್ರೈಮಾಫೇಸಿ ಕೇಸ್ ಇದೆ ಎಂದು ತಿಳಿಸಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಸಂಬಂಧಪಟ್ಟಂಥ ಮಂತ್ರಿಗಳು ತಮ್ಮ ವರದಿಯಲ್ಲಿ ಒಪ್ಪಿಕೊಂಡಿದ್ದಾರೆ. ಮತ್ತು ಅದನ್ನು ಲೋಕಾಯುಕ್ತಕ್ಕೆ ಒಪ್ಪಿಸತಕ್ಕ ಮಾತನ್ನು ಹೇಳಿದ್ದಾರೆ. ಅದನ್ನು ನಾನು ಒಪ್ಪುವುದಿಲ್ಲ. ಲೋಕಾಯುಕ್ತ ಬಗ್ಗೆ ಇಲ್ಲಿ ಸಾಕಷ್ಟು ಚರ್ಚೆಯಾಗಿದೆ. ಅದರ ವಿವರಗಳಿಗೆ ನಾನು ಈ ಸಂದರ್ಭದಲ್ಲಿ ಹೋಗುವುದಿಲ್ಲ. ಲೋಕಾಯುಕ್ತ ಎಂದರೆ ನನ್ನ ದೃಷ್ಟಿಯಲ್ಲಿ ರಾತ್ರಿ ಕಂಡಂತ ಬಾವಿಯಲ್ಲಿ ಹಗಲು ಬೀಳತಕ್ಕ ಕೆಲಸ ಮಾಡುತ್ತಿದ್ದಾರೆ. ಆ ಕೆಲಸ ಮಾಡುವುದು ಬೇಡ. ತತ್‌ಕ್ಷಣ ಅವರನ್ನು ಆಮಾನತ್ತಿನಲ್ಲಿ ಇಡುವ ಅವಶ್ಯಕತೆ ಇದೆ ಕಾರಣ ಎನೆಂದರೆ ಇದು ಒಂದು ಎರಡು ಲಕ್ಷ ರೂಪಾಯಿಗಳ ಅವ್ಯವಹಾರ ಅಲ್ಲ. ಇದರಲ್ಲಿ 5ಕೋಟಿ ರೂಪಾಯಿಗಳ...

ಅಧ್ಯಕ್ಷರು:– ಮಾನ್ಯ ಮುಖ್ಯಮಂತ್ರಿಗಳು 5ಕೋಟಿ ಎಂಬುದನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆ. ಅದು ಅವರಿಗೆ ಗೊತ್ತಿದೆ.

ಶ್ರೀ ಸಿ. ಬೈರೇಗೌಡ:– ಕ್ರಮವನ್ನು ತೆಗೆದುಕೊಳ್ಳತಕ್ಕವರು ಲೋಕೋಪಯೋಗಿ ಮಂತ್ರಿಗಳು ಅವರು ಕೇಳಿಸಲಿಲ್ಲ ಎಂದು ಹೇಳಿದರು ಅದಕ್ಕೆ ಪುನಃ ಹೇಳಬೇಕಾದ ಪರಿಸ್ಥಿತಿ ಬಂತು. ಅವರು ಇದ್ದಾರೆ. ಅವರನ್ನು ಸಸ್‌ಪೆಂಡ್ ಮಾಡಬೇಕು.

ಶ್ರೀ ಎಂ.ವೈ. ಘೋರ್ಪಡೆ:– ಇಲ್ಲಿ 5ಕೋಟಿ ರೂಪಾಯಿಗಳ ದುರುಪಯೋಗ ಆಗಿದೆ ಎಂದು ಏಕಾ ಏಕಿ ಹೇಳಲು ಸಾಧ್ಯವಿಲ್ಲ. ವಿಚಾರಣೆ ಆಗಬೇಕಾಗಿದೆ. ಇರೆಗ್ಯುಲಾರಿಟೀಸ್ ಆಗಿದೆ. ಆಡ್ಮಿನಿಸ್ಟ್ರೇಟೀವ್ ಒಪ್ಪಿಗೆ ಇಲ್ಲದೆ ಸಾಮಾನುಗಳನ್ನು ಕೊಂಡುಕೊಂಡಿದ್ದಾರೆ. ಸ್ಟಾಕ್ ಪೊಸಿಷನ್ ನೋಡದೆ ಖರೀದಿ ಮಾಡಿದ್ದಾರೆ. . . ಈ ರೀತಿ ಕೆಲವು ಮೂರು ನಾಲ್ಕು ಆಕ್ರಮಗಳು ನಡೆದಿವೆ. ಆದ್ದರಿಂದ ಪ್ರೈಮಾಫೇಸಿ ಕೇಸ್ ಇದೆ ಎಂದು ಒಪ್ಪಿಕೊಂಡಿದ್ದೇವೆ. ಇವರಿಂದ ಎಷ್ಟು ಹಣ ಲೋಪವಾಗಿದೆ ಎಂಬುದನ್ನು ಈಗಲೇ ಹೇಳುವುದಕ್ಕೆ ಬರುವುದಿಲ್ಲ. ಲೋಕಾಯುಕ್ತ ಅವರ ವರದಿ ಬಂದ ನಂತರ ಆ ಮೊತ್ತ ಎಷ್ಟು ಎಂಬುದನ್ನು ನಾವು ನಿರ್ದಿಷ್ಟವಾಗಿ ಹೇಳಲು ಸಾಧ್ಯವಾಗುತ್ತದೆ. ಈಗ ಮಾನ್ಯ ಸದಸ್ಯರು ತಕ್ಷಣ ಅವರನ್ನು ಸಸ್‌ಪೆಂಡ್ ಮಾಡಿ ಎಂದು ಹೇಳುತ್ತಿದ್ದಾರೆ. ಅಕ್ಟೋಬರ್ 7ನೇ ತಾರೀಖಿನಂದು ಅವರನ್ನು ವರ್ಗಾವಣೆ ಮಾಡಲಾಗಿದೆ....

ಶ್ರೀ ಸಿ. ಬೈರೇಗೌಡ:– ಸಣ್ಣ ಹುಲ್ಲುಗಾವಲಿನಲ್ಲಿ ಮೇಯುತ್ತಿದ್ದವರನ್ನು ದೊಡ್ಡ ಹುಲ್ಲುಗಾವಲಿಗೆ ಮೇಯಲು ಕಳುಹಿಸಿದ್ದೀರಿ.

ಶ್ರೀ ಎಂ.ವೈ. ಘೋರ್ಪಡೆ:– ಅವರು ಟ್ರಾನ್ಸ್‌ಫರ್ ಆಗಿದ್ದಾರೆ. ಈಗ ಎನ್‌ಕ್ವೈರಿ ಏನು ನಡೆಯುತ್ತಿದೆ ಅದಕ್ಕೆ ಅಡ್ಡ ಬರಲು ಸಾಧ್ಯವಿಲ್ಲ. Some disciplinary action has already been taken in transferring him and ordering an enquiry. ಅವರು ಪಿ.ಡಬ್ಲ್ಯೂ.ಡಿ ಇಲಾಖೆಯವರು ನಾವು ಅಲ್ಲಿಗೆ ಟ್ರಾನ್ಸ್‌ಫರ್ ಮಾಡಿದ್ದೇವೆ. ಇನ್ನು ಹೆಚ್ಚು ಮಾಡಬೇಕಾಗಿಲ್ಲ ಎನ್ನುವುದು ನನ್ನ ಭಾವನೆ.

ಅಧ್ಯಕ್ಷರು:– ಅವರು ಹೇಳಿದ್ದುದು ನಿಮಗೆ ಗೊತ್ತಾಯಿತಲ್ಲ. ಈಗ ಅವರು ಪಿ.ಡಬ್ಲ್ಯೂ.ಡಿ ಅವರ ಹತ್ತಿರ ಇದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್:- ನನ್ನ ಹತ್ತಿರ ಇಲ್ಲ. ಅವರನ್ನು ಬಿ.ಡಿ.ಎ.ಗೆ ಕಳುಹಿಸಿಕೊಟ್ಟಿದ್ದಾರೆ ಚೌಡರೆಡ್ಡಿಯವರು ಶ್ರೀ ಬೈರೇಗೌಡರೇ ಅವರನ್ನು ಕಳುಹಿಸಿಕೊಟ್ಟರೋ ಗೊತ್ತಿಲ್ಲ.

ಶ್ರೀ ಸಿ. ಬೈರೇಗೌಡ:- ಬೇಕಾದರೆ ಯಾರು ಕಳುಹಿಸಲು ಕಾರಣಕರ್ತರು ಎನ್ನುವುದನ್ನು ನಾನು ಹೇಳುತ್ತೇನೆ.

ಅಧ್ಯಕ್ಷರು:- ಬೇಡ, ಬೇಡ.

ಶ್ರೀ ಸಿ. ಬೈರೇಗೌಡ:- ತಾವು ಬೇಡ ಎಂದು ಹೇಳುತ್ತಿದ್ದೀರಿ. ಆದ್ದರಿಂದ ಹೇಳುವುದಿಲ್ಲ.

ಅಧ್ಯಕ್ಷರು:- ಬೇಡ. ಸಣ್ಣ ನಾಯಕರ ವಿಚಾರದಲ್ಲಿ ಈ ಸಭೆಯ ಅಮೂಲ್ಯ ಕಾಲವನ್ನು ವ್ಯಯ ಮಾಡುವುದು ಬೇಡ.

ಶ್ರೀ ಕೆ.ಹೆಚ್. ರಂಗನಾಥ್:- ಪತ್ತೆ ಹಚ್ಚಿದ್ದೇವೆ. ಈಗ ಅದನ್ನು ದೊಡ್ಡದು ಮಾಡುವುದು ಬೇಡ.

ಶ್ರೀ ಸಿ. ಬೈರೇಗೌಡ:- ಅಲ್ಲಿ ಪಂಪುಸೆಟ್ಟುಗಳನ್ನು ಕೊಂಡುಕೊಂಡಿದ್ದಾರೆ, ಅವುಗಳನ್ನು ಆ ಅಪ್ರೂವಡ್ ಫರ್ಮನಲ್ಲಿ ತೆಗೆದುಕೊಳ್ಳಲಿಲ್ಲ. ಬೇರೆ ಫರ್ಮನಲ್ಲಿ ತೆಗೆದುಕೊಂಡಿದ್ದಾರೆ. ಕಾರಣ ಏನು? ಅಲ್ಲಿ ಸಾಕಷ್ಟು ಪೈಪುಗಳಿವೆ. ಆದರೂ ಪೈಪ್‌ಗಳನ್ನು ಕೊಂಡುಕೊಂಡಿದ್ದಾರೆ. ಕಾರಣ ಏನು?

ಅಧ್ಯಕ್ಷರು:- ಮಾನ್ಯ ಘೋರ್ಪಡೆಯವರು ಹಾಗೆ ಹೇಳುತ್ತಿದ್ದಾರೆ. ಏನು ಸ್ವಾಮಿ ಕಾರಣ ಎಂದು ಅವರನ್ನು ಕೇಳುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ:- ಪ್ಯಾನಲ್ ಬೋರ್ಡ್‌ಗಳನ್ನು ತೆಗೆದುಕೊಂಡಿದ್ದಾರೆ. ಅವುಗಳು ಒಂದೂ ಸರಿಯಾಗಿಲ್ಲ, ಅಲ್ಲಿರತಕ್ಕ ಜನರಿಗೆ ಬಹಳ ಅನ್ಯಾಯವಾಗಿದೆ. ಅಲ್ಲಿನ ಜನರಿಗೆ ಕುಡಿಯುವ ನೀರಿಗೆ ತೊಂದರೆ ಆಗಿದೆ. ಅವರನ್ನು ಚಿಕ್ಕಹುಲ್ಲುಗಾವಲಿನಿಂದ ದೊಡ್ಡಹುಲ್ಲುಗಾವಲಿಗೆ ಯಥೇಚ್ಛವಾಗಿ ಮೇಯಲು ಕಳುಹಿಸಿದ್ದೀರಿ. ಇಲ್ಲಿ ಮೆಯ್ದಿರುವುದು ಸಾಕು. ಇನ್ನು ಮುಂದೆ ದೊಡ್ಡ ಹುಲ್ಲುಗಾವಲಿನಲ್ಲಿ ದೊಡ್ಡದಾಗಿ ಮೇಯಲಿ ಎಂದು ಅಲ್ಲಿ ಕಳುಹಿಸಿದ್ದೀರಿ.

ಅಧ್ಯಕ್ಷರು:- ಈಗ ತಾವು ಸರ್ಕಾರದ ಗಮನಕ್ಕೆ ತಂದಿದ್ದೀರಿ. . . .

ಶ್ರೀ ಸಿ. ಬೈರೇಗೌಡ:- ಅಧ್ಯಕ್ಷರೇ ಅವರು ಮಾಡಿರತಕ್ಕಂಥ ದುರ್ವ್ಯವಹಾರ ಏನು ಇದೆ, ಆ ದುರ್ವ್ಯವಹಾರಕ್ಕೆ ಅವರನ್ನು ಸಸ್ಪೆಂಡ್ ಮಾಡಬೇಕು. Suspension is not punishment. ನಾನು ಈಗಲೇ ಪನಿಷ್ ಮಾಡಿ ಎಂದು ಹೇಳುತ್ತಾ ಇಲ್ಲ. ವಿಚಾರಣೆ ನಡೆಯಲಿ. ವರದಿ ಬಂದ ಮೇಲೆ ಮಾಡುತ್ತೇವೆನ್ನತಕ್ಕ ಮಾತನ್ನು ಹೇಳಿದ್ದಾರೆ. ಇವತ್ತಿನ ದಿವಸ ಅವರನ್ನು ಚಿಕ್ಕ ಹುಲ್ಲುಗಾವಲಿನಿಂದ, ದೊಡ್ಡ ಹುಲ್ಲುಗಾವಲಿಗೆ ವರ್ಗ ಮಾಡಿದ್ದಾರೆ. ಅಧ್ಯಕ್ಷರೇ ಈ ಸರ್ಕಾರದ ವ್ಯವಹಾರ, ಅವರನ್ನು ರಕ್ಷಣೆ ಮಾಡತಕ್ಕಂಥದ್ದು. ಅವರನ್ನು ಸಸ್ಪೆಂಡ್ ಮಾಡುತ್ತೇವೆ ಎಂದು ಮಂತ್ರಿಗಳೇ ಹೇಳಲಿ.

ಶ್ರೀ ಕೆ.ಹೆಚ್. ರಂಗನಾಥ್:- ರಕ್ಷಣೆ ಮಾಡುತ್ತೇವೆ ಎಂದು ಯಾರು ಹೇಳಿದರು.

ಶ್ರೀ ಸಿ.ಬೈರೇಗೌಡ:- ಅವರನ್ನು ಸಸ್ಪೆಂಡ್ ಮಾಡುವುದಿಲ್ಲ ಎಂದು ಹೇಳಿದರೆ ಅದನ್ನು ರಕ್ಷಣೆ ಎನ್ನದೆ ಮತ್ತೇನೆಂದು ಹೇಳಬೇಕು. ತಾವು ದಯವಿಟ್ಟು ಹೇಳಿ.

ಅಧ್ಯಕ್ಷರು:- ಮಾನ್ಯ ಲೋಕೋಪಯೋಗಿ ಇಲಾಖೆ ಮಂತ್ರಿಗಳೇ, ಇವರೇ ದಿನಾಂಕ 29.12.92ರಂದು ವರದಿ ಸಲ್ಲಿಸಿದ್ದಾರೆ. ಅನಂತರ ವಿಭಾಗಾಧಿಕಾರಿಗಳು ಬೆಂಗಳೂರು,

ಸರ್ಕಾರದ ಕಾರ್ಯದರ್ಶಿಗಳು ಗ್ರಾಮೀಣ ಅಭಿವೃದ್ಧಿಯ ಮತ್ತು ಪಂಚಾಯತ್ ರಾಜ್ಯ ಇಲಾಖೆಯವರು ದಿನಾಂಕ 6.1.63 ರಂದು ವರದಿಯನ್ನು ಸಲ್ಲಿಸಿದ್ದಾರೆ. ಅವರು 6ನೇ ತಾರೀಖು ವರದಿ ಸಲ್ಲಿಸಿದ್ದಾರೆ. ಸದರಿ ವಿಷಯವನ್ನು ಲೋಕಾಯುಕ್ತಕ್ಕೆ ವಹಿಸಲು ಕ್ರಮ ತೆಗೆದುಕೊಳ್ಳಲಾಗುತ್ತದೆ. ಮೊನ್ನೆ 6ನೇ ತಾರೀಖು ರಿಪೋರ್ಟ್ ಬಂದಿದೆ. ಸೆಕ್ರೆಟರಿ, ಕಾರ್ಯದರ್ಶಿ, ಪಂಚಾಯತ್‌ರಾಜ್ಯ ವ್ಯವಸ್ಥೆಯಿಂದ ಅದನ್ನು ಲೋಕಾಯುಕ್ತಕ್ಕೆ ಕಳುಹಿಸುವುದಕ್ಕೆ ಈಗ ಪ್ರೊಸೆಸ್ ಮಾಡುತ್ತಾ ಇದ್ದರೆ, ಪ್ರಕ್ರಿಯೆಗಳು ನಡೆಯುತ್ತಾ ಇವೆ. ಆದುದರಿಂದ ಈ ಸರ್ಕಾರದ ವಿಚಾರದಲ್ಲಿ ನೀವು ಸಂಶಯ ಪಡತಕ್ಕಂಥ ವಿಚಾರವೇನೂ ಇಲ್ಲ. ಇದರಲ್ಲಿ ಬಹಳ ತೀವ್ರವಾದಂಥ ಕ್ರಮವನ್ನು ನಡೆಸಿದ್ದಾರಲ್ಲ ನಿಮ್ಮ ಆತುರವೇನು ಅಂದರೆ ಸಸ್‌ಪೆಂಡ್ ಮಾಡಿಸಬೇಕು ಎಂದು ಅವರನ್ನು ಸರಿ ಸಸ್‌ಪೆಂಡ್ ಮಾಡಿಸಬೇಕೆಂದು ಯೋಚನೆ ಮಾಡಿ.

ಶ್ರೀ ಸಿ. ಬೈರೆಗೌಡ:- ಅಧ್ಯಕ್ಷರೇ ಅವರೇ ಹೇಳಲಿ.

ಶ್ರೀ ಕೆ.ಹೆಚ್. ರಂಗನಾಥ್:- ಅಧ್ಯಕ್ಷರೇ ಮಾನ್ಯ ಸದಸ್ಯರು ಮಂತ್ರಿಗಳಾಗಿದ್ದಂಥವರು ಮೇಲಾಗಿ ಈ ಅಧಿಕಾರಿ ನನ್ನ ಇಲಾಖೆಯಲ್ಲೂ ಇಲ್ಲ. ಹೆಚ್.ಯು.ಡಿ ಗೆ ಅವರು ಡೆಪ್ಯುಟೇಷನ್ ಹೋಗಿ, ಬಿಡಿಎಗೆ ಹೋಗಿದ್ದಾರೆ. ತಾವು ಗಮನಹರಿಸದಂಥ ಅಪ್ರಕ್ರೀಯೆ ನಡೆದಿದೆ. ನಿನ್ನೆ ಮೊನ್ನೆ ರಜೆ, ಸೆಕೆಂಡ್ ಸಾರ್ಟಡೇ ಸಂಡೇ ಇವತ್ತು ಏನಾಗುತ್ತದೆ ನೋಡಿ. ನಾಳೆ ಇನ್ನು ಇರುತ್ತೀರಲ್ಲ.

ಶ್ರೀ ಸಿ. ಬೈರೇಗೌಡ:- ಸಸ್‌ಪೆಂಡ್ ಮಾಡಿದರೆ ಸಂತೋಷ.

ಶ್ರೀ ಕೆ.ಹೆಚ್. ರಂಗನಾಥ್:- ಹಾಗೆಂದು ಹೇಳಿ. ಸದನದಲ್ಲಿ ಮಾಡಿದ್ದೇವೆಂದು ಎಲ್ಲಾ ಸರಿ ಹೋಗುವುದಿಲ್ಲ. ಅದು ಕ್ರಮವೂ ಅಲ್ಲ. ಕಾನೂನು ಇದೆ, ಕಾನೂನು ಪ್ರಕಾರ ನೋಡಿ ಮಾಡಬೇಕಾಗುತ್ತದೆ.

(2) ಚಿಕ್ಕಮಗಳೂರು, ಕೊಡಗು ಮತ್ತು ಹಾಸನ ಜಿಲ್ಲೆಗಳಲ್ಲಿ ಬಗರ್ ಹುಕ್ಕುಂ ಜಮೀನಿನ ಸಕ್ರಮ.

ಶ್ರೀಮತಿ ಮೋಟಮ್ಮ:- ಸನ್ಮಾನ್ಯ ಅಧ್ಯಕ್ಷರೇ ನಾನು ಚಿಕ್ಕಮಗಳೂರು ಕೊಡಗು ಮತ್ತು ಹಾಸನ ಜಿಲ್ಲೆಗಳಲ್ಲಿ ಭೂಮಿ ಇಲ್ಲದ ಬಡವರು, ಹರಿಜನ ಗಿರಿಜನರು ಏನು ಕಾಫಿ ಬಗರ್ ಹುಕ್ಕುಂ ಜಮೀನಿನಲ್ಲಿ ಮಾಡಿದ್ದಾರೆ. ಅದನ್ನು ಸಕ್ರಮಗೊಳಿಸುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):-

ಕರ್ನಾಟಕ ಭೂ ಕಂದಾಯ ಕಾಯಿದೆ ಪ್ರಕರಣ 94ಎ ಆಡಿಯಲ್ಲಿ ಪ್ಲಾಂಟೇಷನ್ ಜಮೀನುಗಳನ್ನು ಸಕ್ರಮೀಕರಿಸಲು: ಮಂಜೂರಾತಿ ಮಾಡಲು ಬರುವುದಿಲ್ಲ. ಮುಂದೆ ಆದಾಗ್ಯೂ ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಇತರೆ ಪ್ಲಾಂಟೇಷನ್ ಅಂದರೆ ಏಲಕ್ಕಿ, ಕಾಫಿ, ಮೆಣಸು, ರಬ್ಬರ್, ಟೀ ಇತ್ಯಾದಿ ಜಮೀನುಗಳನ್ನು ಸಕ್ರಮಗೊಳಿಸಲು ಬರುವುದಿಲ್ಲವಾಗಿರುತ್ತದೆ. ಆದುದರಿಂದ ಪ್ಲಾಂಟೇಷನ್ ಬೆಳೆಗಳ ಬಗರ್ ಹುಕ್ಕುಂ ಸಾಗುವಳಿಯನ್ನು ಸಕ್ರಮಗೊಳಿಸಲು ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುತ್ತದೆ. ಈ ಯೋಜನೆಯು ಬಡ ಭೂರಹಿತರು, ವ್ಯವಸಾಯ ಕಾರ್ಮಿಕರು ಹಾಗೂ ರೈತರಿಗೆ ಮಾತ್ರ ಅನ್ವಯಿಸುತ್ತದೆ. ಸರ್ಕಾರಕ್ಕೆ ಲಭ್ಯವಿರುವ ಮಾಹಿತಿಪ್ರಕಾರ ಪ್ಲಾಂಟೇಷನ್ ಜಮೀನುಗಳನ್ನು ಅತಿಕ್ರಮಣ ಮಾಡಿರುವುದು ಮುಖ್ಯವಾಗಿ ದೊಡ್ಡ ರೈತರು ಮತ್ತು ದೊಡ್ಡ ಪ್ಲಾಂಟರ್ಸ್ ಆಗಿರುವುದರಿಂದ ವ್ಯವಸಾಯಕ್ಕೆ ಸಂಬಂಧಿಸಿದ ಜಮೀನುಗಳನ್ನು ಮಾತ್ರ ಸಕ್ರಮಗೊಳಿಸಲು ಯೋಜಿಸಲಾಗಿದೆ. ಲಭ್ಯವಿರುವ ಮಾಹಿತಿಯ ಪ್ರಕಾರ ಒತ್ತುವರಿಯಾದ ಪ್ಲಾಂಟೇಷನ್ ಜಮೀನುಗಳ ವಿವರ ಈ ಕೆಳಕಂಡಂತಿದೆ:-